ಅಸಲು ದಾವಾ ಸಂಖ್ಯೆ - 303/2019
ಪಿಡಬ್ಲ್ಯೂ - 01
ದಿನಾಂಕಃ 03.03.2023
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ - ಶ್ರೀ ವಿ ಬಿ ಟಿ ವಕೀಲರಿಂದ.

ನಾನು ಈ ಕೆಳಕಂಡ ದಸ್ತಾವೇಜುಗಳನ್ನು ಹಾಜರು ಪಡಿಸಿದ್ದೇನೆ.

ದಿನಾಂಕಃ 29.11.1979 ರ ನೊಂದಾಯಿತ ಖರೀದಿಪತ್ರ ಹಾಜರುಪಡಿಸಿದ್ದು ಅದು 3 ರೂಪಾಯಿ 50 ನಯಾಪೈಸೆಯ ಒಂದು, ಎರಡು ರೂಪಾಯಿ ಒಂದು ಮತ್ತು 75 ನಯಾಪೈಸೆಯ ಒಂದು ಚಾಪಾಕಾಗದ ಒಳಗೊಂಡಿರುತ್ತದೆ ಅದನ್ನು ನಿಪಿ-20 ಎಂದು ಗುರುತಿಸಲಾಯಿತು.

ಆದ್ದರಿಂದ ದಾವೆಯಲ್ಲಿ ಕೋರಿಕೊಂಡಂತೆ ಡಿಕ್ರಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ ಜಿ ಎನ್ ವಕೀಲರಿಂದಃ

ನಾನು ಎಸ್ ಎಸ್ ಎಲ್ ಸಿ ಯವರೆಗೆ ಕಲಿತಿದ್ದೇನೆ. ನಾನು ಗ್ರಾಮಪಂಚಾಯತಿಯ ಕಾರ್ಯದರ್ಶಿ ಅಂತಾ ಕೆಲಸ ಮಾಡಿ ನಿವೃತ್ತಿಯಾಗಿದ್ದೇನೆ ಎಂದರೆ ಸರಿ. ಈ ವಿಚಾರವನ್ನು ದಾವೆಯಲ್ಲಾಗಲೀ ಅಥವಾ ಪ್ರಮಾಣಪತ್ರದಲ್ಲಾಗಲೀ ಬರೆಸಿಲ್ಲ ದಾವಾ ಆಸ್ತಿ ಮೂಲತಃ ಪ್ರತಿವಾದಿಯರ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಸಾಕ್ಷಿ ಮುಂದುವರೆದು ಸ್ವತಃ ಅದು ನಮ್ಮ ಸ್ವಂತ ಆಸ್ತಿ ಅಂತಾ ನುಡಿಯುತ್ತಾರೆ. ದಾವಾ ಆಸ್ತಿ ನಮ್ಮ ಸ್ವಂತ ಆಸ್ತಿ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರ ತಂದೆ ಮರಿಯಪ್ಪನಿಗೆ ಪ್ರತಿವಾದಿಯರನ್ನು ಹೊರತುಪಡಿಸಿ ಗಂಗವ್ವ, ತಿಪ್ಪವ್ವ, ಚಂದ್ರವ್ವ ಅಂತಾ ಮೂರು ಜನ ಹೆಣ್ಣು ಮಕ್ಕಳು ಇರುತ್ತಾರೆ ಎಂದರೆ ನನಗೆ ಮಾಹಿತಿ ಇಲ್ಲ. ಪ್ರತಿವಾದಿಯರಿಗೆ ಮೂಲತಃ ಹೇಗೆ ಬಂದಿರುತ್ತದೆ ಅಂತಾ ನನಗೆ ಗೊತ್ತಿಲ್ಲ ಆದರೆ ದಾವಾ ಆಸ್ತಿ ನಮ್ಮ ಸ್ವಂತ ಆಸ್ತಿ. ದಾವಾ ಆಸ್ತಿ ನನ್ನ ಸ್ವಂತ ಆಸ್ತಿ ಅಂತಾ ತೋರಿಸಲು ಪಹಣಿ ಮತ್ತು ಖರೀದಿಪತ್ರ ಹಾಜರುಪಡಿಸಿದ್ದೇನೆ. ದಾವಾ ಆಸ್ತಿ ಪ್ರತಿವಾದಿಯರಿಗೆ ಸರಕಾರದವರು ಮಂಜೂರು ಮಾಡಿದ ಆಸ್ತಿ ಎಂದರೆ ಸರಿಯಲ್ಲ. ಪ್ರತಿವಾದಿಯರು ಪರಿಶಿಷ್ಟ ಜಾತಿಗೆ ಸೇರಿದವರು ಎಂದರೆ ಸರಿ. ನನ್ನ ಮಾವ ಗುರುಸಿದ್ದಗೌಡ ಊರ ಹಿರೇತನ ಮಾಡುತ್ತಿದ್ದ ಎಂದರೆ ಸರಿ. ನಮ್ಮದು ಮೂಲತಃ ಗೌಡಾಳಿಕೆ ಮನೆತನ ಎಂದರೆ ಸರಿ. ನಮ್ಮ ಮಾವ ಗುರಸಿದ್ದಗೌಡ ದಾವಾ ಆಸ್ತಿಗೆ ಪೋಕಳ ರೀತಿಯಲ್ಲಿ ನಮ್ಮ ಹೆಸರನ್ನು ನಮೂದು ಮಾಡಿಸಿರುತ್ತಾನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೂ ನಮಗೂ ಯಾವುದೇ ರೀತಿಯ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಾವು ಯಾವ ಕಾಲಕ್ಕೂ ಕಬ್ಜಾ ಮತ್ತು

ವಹಿವಾಟಿಯಲ್ಲಿ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಮೊದಲಿನಿಂದಲೂ ನಾನೇ ಕಬ್ಜೆಯಲ್ಲಿರುತ್ತೇನೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಚಂದ್ರನಗೌಡ ಮತ್ತು ಮಾವ ಗುರುಸಿದ್ದನಗೌಡ ಪ್ರತಿವಾದಿಯರ ಮೇಲೆ ದಬ್ಬಾಳಿಕೆ ಮಾಡಿದಂತೆ ನಾನು ಸಹ ದಬ್ಬಾಳಿಕೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಾಕ್ಷ್ಯ ಪ್ರಮಾಣಪತ್ರದಲ್ಲಿ ದಾವಾ ಆಸ್ತಿಗೆ ನನ್ನ ತಾಯಿಯ ಹೆಸರು 1957 ರಿಂದ 1970 ರವರೆಗೆ ದಾಖಲಿತ್ತು ಅಂತಾ ಹೇಳಿದ್ದು ಯಾವ ನಾತೆಯಿಂದ ದಾಖಲಾಗಿತ್ತು ಎಂದರೆ ಹಿರಿಯರಿಂದ ಬಂದ ಆಸ್ತಿ ಅಂತಾ ದಾಖಲಿತ್ತು. ಆ ಕುರಿತು ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ನಮ್ಮ ತಾಯಿಗೆ ಸದರಿ ಅಸ್ತಿ ಹೇಗೆ ಬಂದಿತ್ತು ಎಂದರೆ ಅವರು ಖರೀದಿ ಹಿಡಿದಿದ್ದರು. ಸದರಿ ಖರೀದಿ ಕಾಗದವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಅದು ನನಗೆ ಗೊತ್ತಿಲ್ಲ. ಆ ರೀತಿ ಯಾವುದೇ ಖರೀದಿ ಆಗಿರುವುದಿಲ್ಲ ಆದ್ದರಿಂದ ಯಾವುದೇ ದಾಖಲೆ ಇರುವುದಿಲ್ಲ ಆದ್ದರಿಂದ ಹಾಜರುಪಡಿಸಿಲ್ಲ ಎಂದರೆ ಅದು ನನಗೆ ಸಿಕ್ಕಿಲ್ಲ ಆದ್ದರಿಂದ ಹಾಜರುಪಡಿಸಿಲ್ಲ. 1957 ರಿಂದ 1970 ರವರೆಗೆ ನನ್ನ ತಾಯಿ ಹೆಸರನ್ನು ಪೋಕಳ ರೀತಿಯಲ್ಲಿ ದಾಖಲು ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಅದನ್ನೇ ದುರುಪಯೋಗಪಡಿಸಿಕೊಂಡು ಸದರಿ ದಾವಾ ಆಸ್ತಿ ನಮ್ಮ ಹಿರಿಯರಿಂದ ಬಂದಿರುತ್ತದೆ ಅಂತಾ ಸುಳ್ಳು ಸಾದಿಸುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಮನೆತನಕ್ಕೆ ಮತ್ತು ಪ್ರತಿವಾದಿಯರ ಮನೆತನಕ್ಕೆ ಯಾವುದೇ ರೀತಿಯ ಸಂಬಂಧ ಇಲ್ಲ. ಅದೇ ರೀತಿ ದಾವಾ ಆಸ್ತಿಗೆ ಮತ್ತು ನಮಗೆ ಯಾವುದೇ ರೀತಿಯ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಮೂಲತಃ ಸರ್ವೆ ನಂ.79 ಒಟ್ಟು ಕ್ಷೇತ್ರ 14 ಎಕರೆ 16 ಗುಂಟೆ ಇತ್ತು ಎಂದರೆ ಸರಿ. ಸದರಿ ಆಸ್ತಿಯನ್ನು ಸರಕಾರದವರು ಪ್ರತಿವಾದಿಯರ ಪೂರ್ವಜರಿಗೆ 1955-56 ರಲ್ಲಿ ಮಂಜೂರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅದರಂತೆ ಪ್ರತಿವಾದಿಯರ ಪೂರ್ವಜರ ಹೆಸರು ಡ ನಂ.1358 ರಲ್ಲಿ ಮಂಜೂರಾಗಿರುತ್ತದೆ ಎಂದರೆ ಸರಿಯಲ್ಲ. ಅದೇ ರೀತಿ ಮೈಸೂರು ರಿವಿಜನ ಸೆಟಲ್‌ಮೆಂಟರಿ ಪ್ರಕಾರ ಪೈಸಲ್ ಪತ್ರಿಕೆಯಲ್ಲಿ ಬಂದಿರುತ್ತದೆ ಎಂದರೆ ಸರಿಯಲ್ಲ. ಗ್ರಾಮ ಪತ್ರಿಕೆ ರಿಕಾರ್ಡನಲ್ಲಿ ದುರಸ್ತಿ ಮಾಡಿದಂತೆ ಪೈಸಲ್ ಪತ್ರಿಕೆ ಪಿರಸ್ತೆ ನಂ.122 ಅಂತಾ ದುರಸ್ತಿಯಾಗಿರುತ್ತದೆ ಎಂದರೆ ಸರಿಯಲ್ಲ. ಅದರ ಪೈಕಿ ನೀಲಪ್ಪ ತನ್ನ ತಾಯಿ ಸಹೋದರ ದುರ್ಗಪ್ಪ ಯಲ್ಲಪ್ಪ ಮಾದರ ಇತನಿಗೆ 7 ಎಕರೆ 7 ಗುಂಟೆ ಜಮೀನನ್ನು ಮಾರಾಟ ಮಾಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಮಾರಾಟ ಮಾಡಿದ ಮ್ಯೂಟೇಶನ್ ನಂ.204 ಮಂಜೂರಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು.ಸವಣೂರು